ಕೊಡ್ಬೇಕು, ಕೊಂಡುಕೊಳ್ಳೋರು ಕೊಡ್ಬೇಕು ಅದೆಲ್ಲ ತಲೆನೋವು. ನಾವು ಸುಮ್ಮನೆ ಬಾರ್‌ಗೇನ್ ಮಾಡ್ತಾ ಇರೋದು ಬ್ಯಾಡ ಅನ್ಸುತ್ತೆ. ಒಂದು ರೌಂಡ್ ಫಿಗರ್ ಒಂದೂಕಾಲು ಕೋಟಿ, ಒಂದು ಮೂರ‍್ನಾಲ್ಕು ಲಕ್ಷ ಆಚೆಈಚೆ ಆಗಬಹುದು. ತುಂಬಾ ಎಳೆದಾಟ ಮಾಡ್ತಾ ನಿಮ್ಮ ಟೈಮೂ ವೇಸ್ಟ್...' ಎಂದು ಒಂದೇ ಉಸಿರಲ್ಲಿ ಹೇಳಿದರು.

ಮನುಷ್ಯ ಭಾಳ ಪ್ರ್ಯಾಕ್ಟಿಕಲ್ ಅಂದುಕೊಂಡ ಮುಕುಂದ ಅವರ ಮುಖವನ್ನೇ ನೋಡತೊಡಗಿದ. ಕೃಷ್ಣೇಗೌಡರು ಕೂತಲ್ಲಿಂದಲೇ ಸುತ್ತಲೂ ಕಣ್ಣಾಡಿಸಿ ಮನೆಯನ್ನು ನೋಡುತ್ತಿದ್ದರು. ಅಡುಗೆಮನೆ ಕಡೆ, ರೂಮಿನ ಕಡೆ, ಬಲಭಾಗದಲ್ಲಿದ್ದ ಮಹಡಿ ಮೆಟ್ಟಿಲುಗಳ ಮೇಲೆ ಕೆಳಗೆ ನೋಡುತ್ತಿದ್ದರು. 'ಮನೆ ಒಂದ್ಸಲ ನೋಡಬೌದು' ಎಂದು, ಟೀವಿ ನೋಡುತ್ತ ಕುಳಿತಿದ್ದ ಮಗಳ ಕಡೆಗೆ ತಿರುಗಿ, 'ಮಾಲಿನಿ, ಇವರಿಗೆ ಮನೆ ತೋರ‍್ಸು ಮಗಳೆ' ಅಂದರು.

ಪ್ರಾಪರ್ಟಿ ತನ್ನ ಮನಸ್ಸಿಗೆ ಹಿಡಿಸಿರಲಿಲ್ಲವಾಗಿ ಉತ್ಸಾಹವನ್ನೇನೂ ತೋರದೆ ಸುಮ್ಮನೆ ಕುಳಿತಿದ್ದ ಮುಕುಂದನ ಕಡೆ ನೋಡುತ್ತಾ 'ನೀನು ನೋಡಿ ಬಾ' ಎಂದರು ಕೃಷ್ಣೇಗೌಡರು. ನೋಡುವ ಶಾಸ್ತ್ರಕ್ಕಾಗಿ ಮಾಲಿನಿಯನ್ನು ಹಿಂಬಾಲಿಸಿ ಮುಕುಂದ ಹೋದ ಕೂಡಲೆ, 'ಮನೆ ಹೊಸದಾಗಿ ಚೆನ್ನಾಗೇ ಇದೆಯಲ್ಲಾ, ಯಾಕೆ ಸೇಲ್ ಮಾಡ್ತೀರಿ' ಅಂದರು. ತಮ್ಮ ಕಡೆಗೆ ನೋಡುತ್ತ ಒಂದೆರಡು ಗಳಿಗೆ ಸುಮ್ಮನಿದ್ದದ್ದನ್ನು ಕಂಡು, ತಾವು ಈ ಪ್ರಶ್ನೆ ಕೇಳಬಾರದಿತ್ತೇನೊ ಅಂದುಕೊಳ್ಳುವಷ್ಟರಲ್ಲಿ, 'ನೋಡೀ ಇವರೇ, ಎಲ್ಲಾ ಚೆನ್ನಾಗೇ ಇತ್ತು, ಈಗಲೂ ಚೆನ್ನಾಗಿದೆ. ಮಗಳು ಮಾಲಿನಿಗೆ ಎಲ್ಲಿ ಕೂತರೂ ಎಲ್ಲಿ ನಿಂತರೂ ಅವರ ಅಮ್ಮನ ನೆನಪೇ ಬರ‍್ತಿರುತ್ತೆ. ಈಗ ಸರಿಯಾಗಿ ಆರು ತಿಂಗಳಾಯ್ತು. ಯಾವಾಗ ನೋಡಿದರೂ ಒಂದೇಕಡೆ ಸುಮ್ಮನಿದ್ದಬಿಡ್ತಾಳೆ, ಅವಳ ಸ್ಟಡೀಸ್ ಕಡೆಗೂ ಮನಸ್ಸು ಕೊಡ್ತಿಲ್ಲ' ಎನ್ನುವಾಗ ಅವರ ಕಣ್ಣುಗಳಲ್ಲಿ ಜಿನುಗಿದ ತೇವವನ್ನು ಕಂಡು ಕೃಷ್ಣೇಗೌಡರು ಶಾಕ್ ಆದಂತಾಗಿ ಒಂದು ಗಳಿಗೆ ಅಧೀರರಾದರು. ಮಾತು ಮುಂದುವರಿಸಲು ಆಗಲಿಲ್ಲ. ಕೇಳಲೋ ಬೇಡವೋ ಎಂದು ಕಷ್ಟಪಟ್ಟು 'ಏನಾಗಿತ್ತು ಮನೆಯವರಿಗೆ' ಅಂದರು. 'ಏನೊ ಸಾರ್, ಹಣೆಬರ, ಕೊನೆಗಳಿಗೇಲಿ ನಂಗೂ ಮಗಳಿಗೂ ಮುಖ ಕೂಡ ಸಿಗಲಿಲ್ಲ. ದೂರ... ದೂರದಿಂದಲೇ... ತೋರಿಸಿ ದಫನ್ ಮಾಡಿಬಿಟ್ರು...' ಅನ್ನುತ್ತಿದ್ದಂತೆ ಅವರ ಗಂಟಲು ಕಟ್ಟಿತು. ಪಂಚೆಯ ತುದಿಯಿಂದ ಕಣ್ಣೊರಸಿಕೊಳ್ಳುತ್ತಾ ಮಗಳು ಬಂದಾಳು ಎಂದು ಸುತ್ತಲೂ ನೋಡಿದರು. ಶಾಕ್ ಆದಂತಿದ್ದ ಕೃಷ್ಣೇಗೌಡರು ಬಾಗಿ ಅವರ ಭುಜದ ಮೇಲೆ ಕೈಯಿಟ್ಟು 'ಐಯಾಮ್ ಸೋ ಸ್ಸಾರೀ ಇವರೇ... ಸಮಾಧಾನ ಮಾಡ್ಕೊಳ್ಳಿ... ಈಗ ನಿಮ್ಮ ಮಗಳನ್ನ ಚೆನ್ನಾಗಿ ನೋಡ್ಕೋಬೇಕಾದ್ದೇ ಪ್ರೈಮರಿ ರೆಸ್ಪಾನ್ಸಿಬಿಲಿಟಿ, ನಿಮಗೂ ನಮಗೂ ಅರ್ಥವಾಗುತ್ತೆ, ಆಕೆಗೆ ಇನ್ನೂ ಚಿಕ್ಕವಯಸ್ಸು' ಅಂದರು.

ಮನೆ ನೋಡಿದ ಮುಕುಂದ ಒಬ್ಬನೇ ಮೆಟ್ಟಿಲುಗಳಿಳಿದು ಬಂದು ಅಪ್ಪನ ಪಕ್ಕ ಕುಳಿತ. ಮಾಲಿನಿ ಕೆಳಗಿಳಿಯದೆ ಮಹಡಿಯಲ್ಲೇ ಉಳಿದಳು. ಪರಿಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡ ಕೃಷ್ಣೇಗೌಡರು, 'ಸರಿ, ನಾವು ನಿಮಗೆ ಫೋನ್ ಮಾಡ್ತೀವಿ, ನಿಮ್ಮ ನಂಬರ್ ಕೊಡಿ, ನಿಮ್ಮ ಹೆಸರೇ ಕೇಳಲಿಲ್ಲ, ನನ್ನ ಹೆಸರು ಕೃಷ್ಣೇಗೌಡ, ಬ್ಯಾಂಕ್ ಮ್ಯಾನೇಜರ್ ಆಗಿ ರಿಟೈರ್ ಆಗಿದೀನಿ, ಇವನು ನನ್ನ ಮಗ ಮುಕುಂದ, ಇನ್‌ಫ್ಯಾಕ್ಟ್ ಇವನಿಗೇ ಪ್ರಾಪರ್ಟಿ ನೋಡ್ತಿರೋದು'. 'ಒಳ್ಳೇದು, ನನ್ನ ಹೆಸರು ಆರ್. ಶಿವರಾಮು, ನನ್ನ ನಂಬರ್ ಸೇವ್ ಮಾಡ್ಕೊಳ್ಳಿ.'

ಹೇಗೂ ಈ ಪ್ರಾಪರ್ಟಿ ಸೆಟ್ ಆಗಲ್ಲ ಎಂಬ ನಿರಾಸಕ್ತಿಯಿಂದಲೇ ಮುಕುಂದ ಮೊಬೈಲಲ್ಲಿ ಸೇವ್ ಮಾಡಿಕೊಂಡ. ಇಬ್ಬರೂ ಎದ್ದು 'ನಮಸ್ಕಾರ ಬರ‍್ತೀವಿ' ಅಂದರು. ಮುಕುಂದ ಮುಂದೆ ಮುಂದೆ ಹೋಗಿ ಕಾರ್ ಬೀಗ ತೆಗೆಯುತ್ತಿದ್ದ. ಶಿವರಾಮು ಗೇಟಿನವರೆಗೂ ಬಂದರು. ಕೃಷ್ಣೇಗೌಡರು ಒಂದು ಗಳಿಗೆ ನಿಂತು ಕಾಂಪೌಂಡಿನ ಒಳಗೆ ಮತ್ತು ಹೊರಗಿದ್ದ ಮೂರೂ ಮರಗಳನ್ನು ಕತ್ತೆತ್ತಿ ನೋಡಿದರು. ಶಿವರಾಮು ಕ್ಷೀಣಸ್ವರದಲ್ಲಿ 'ಮಾಲಿನಿಯ ಅಮ್ಮ ಸಸಿಗಳನ್ನ ತಂದು ತಾವೇ ಕೈಯಾರ ನೆಟ್ಟು ಬೆಳೆಸಿದ ಮರಗಳು, ಚೆನ್ನಾಗಿ ಬೆಳೆಯುವವರೆಗೆ ಒಂದು ದಿನಾನು ತಪ್ಪದೇ ತುಂಬ ಪ್ರೀತಿಯಿಂದ ನೀರುಣಿಸುತ್ತಿದ್ದರು' ಅಂದರು. ಕೃಷ್ಣೇಗೌಡರು ಅವರ ಮುಖದ ಕಡೆ ನೋಡಿ 'ನಿಮ್ಮ ಮಗಳಿಗೆ ಧೈರ್ಯ ಹೇಳಿ ಶಿವರಾಮು ಅವರೇ' ಎಂದು ಕಾರಿನ ಕಡೆ ಹೆಜ್ಜೆಯಿಟ್ಟರು.